## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಡರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ. 52/2026**

**ಪಿರ್ಯಾದಿ** : ರಾಜ್ಯ ಸರ್ಕಾರ,
ಕುಟ್ಟ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿ** : ಶ್ರೀ ಮಣಿ ಕೆ,
ತಂದೆ: ಪೌತಿ ಮ್ಯಾಥ್ಯು,
ಪ್ರಾಯ 66 ವರ್ಷ
ವಾಸ: ಆಳಂದೋಡು ಪೈಸಾರಿ,
ಕೆ.ಬಾಡಗ ಗ್ರಾಮ, ಕೊಡಗು.

**ಆರೋಪಣೆ**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:

ದಿನಾಂಕ: 08.01.2025 ರಂದು ಸಮಯ ಸಂಜೆ 08.05 ಗಂಟೆಗೆ ಕುಟ್ಟ ಪೋಲೀಸ್ ಠಾಣಾ ಸರಿಹದ್ದಿಗೆ ಸೇರಿದ ಆಳಂದೋಡು ಪೈಸಾರಿಯ ಸಾರ್ವಜನಿಕ ರಸ್ತೆಗೆ ಒತ್ತಾಗಿರುವ ಆರೋಪಿಯಾದ ನೀವು ತಮ್ಮ ದಿನಸಿ ಅಂಗಡಿಯಲ್ಲಿ ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ 7 Original Choice Deluxe Whisky ಯ ಟೆಟ್ರಾ ಪ್ಯಾಕೇಟ್‌ಗಳನ್ನು, ಹಾಗೂ ಒಂದು ಲೀಟರ್ ನ ಒಂದು ಖಾಲಿ ನೀರಿನ ಬಾಟಲಿ ಹಾಗೂ ಎರಡು ಪ್ಲಾಸ್ಟಿಕ್ ಲೋಟಾಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯವನ್ನು ಕುಡಿಯಲು ಅನುವು ಮಾಡಿ ಕೊಟ್ಟಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಕಲಂ 15(ಎ) ಮತ್ತು 32(3) ಕೆ.ಇ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

**ಆರೋಪಿಯ ಹೇಳಿಕೆ**

ಪ್ರಶ್ನೆ ಸಂಖ್ಯೆ: 1 ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೇ?

ಉತ್ತರ: **ಅರ್ಥವಾಯಿತು**.

ಪ್ರಶ್ನೆ ಸಂಖ್ಯೆ 2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ ?

ಉತ್ತರ: **ತಪ್ಪಾಯಿತು ದಂಡ ಕಟ್ಟುತ್ತೇನೆ**.

ಮೇಲ್ಕಂಡ ಎಲ್ಲಾ ಆಪಾಧನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಪೊನ್ನಂಪೇಟೆ,

ದಿಃ24-03-2026

Sd/-

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಪೊನ್ನಂಪೇಟೆ.